ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: 22 ವಿಧಾನ ಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ

ದಿನಾಂಕ : DATE : 25/3/21

ಸಂಯುಕ್ತ ಕರ್ನಾಟಕ

ಕನ್ನಡಿಗರ ಸಾಕ್ಷಿಪ್ರಜ್ಞೆ

25/3/21

# ಸದನದಲ್ಲಿ ಪ್ರತಿಧ್ವನಿ

- ವಿಶೇಷ ವರದಿ ಪೂರ್ಣ ಓದಿದ ಮುಖ್ಯಮಂತ್ರಿ
- ತಜ್ಞರ ನಿಲುವು ಓದಿಯಾದ್ರೂ ಬದಲಾಗ್ರಪ್ಪಾ

ವಿಧಾನಸಭೆ: ಸಿಡಿ ಕಲಾಪಕ್ಕೆ ಧಿಕ್ಕಾರ ಎಂಬ ಶೀರ್ಷಿಕೆಯಡಿ ಸಂಯುಕ್ತ ಕರ್ನಾಟಕ ಬುಧವಾರ ಪ್ರಕಟಿಸಿದ ವಿಶೇಷವರದಿ ವಿಧಾನಸಭೆಯಲ್ಲಿ ಪ್ರತಿಧ್ವನಿಸಿತು. ಬಜೆಟ್ ಮೇಲಿನ ಉತ್ತರದ ಬಳಿಕ ಪತ್ರಿಕೆಯನ್ನು ಪ್ರಸ್ತಾಪಿಸಿದ ಸಿಎಂ ಯಡಿಯೂರಪ್ಪ ವಿಶೇಷವರದಿಯನ್ನು ಸಂಪೂರ್ಣವಾಗಿ ಸದನದಲ್ಲಿ ಓದಿ ಹೇಳಿದ್ದು ವಿಶೇಷವಾಗಿತ್ತು.

ಸಿಡಿ ಹಗರಣದ ನ್ಯಾಯಾಂಗ ತನಿಖೆಗೆ ಆಗ್ರಹ ಮತ್ತು ಕೋರ್ಟ್‌ನಲ್ಲಿ ರಕ್ಷಣೆ ಕೋರಿರುವ ಸಚಿವರ ರಾಜೀನಾಮೆಗೆ ಆಗ್ರಹಿಸಿ ವಿಪಕ್ಷ ಕಾಂಗ್ರೆಸ್ ಸತತ 2 ದಿನಗಳಿಂದ ಸದನದಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಹಿನ್ನೆಲೆಯಲ್ಲಿ ಪತ್ರಿಕೆ ವಿವಿಧ ಕ್ಷೇತ್ರಗಳ ಗಣ್ಯರ ಅಭಿಪ್ರಾಯ ಸಂಗ್ರಹಿಸಿ ಪ್ರಕಟಿಸಿತ್ತು.

ಸಿಡಿ ಕಲಾಪಕ್ಕೆ ಧಿಕ್ಕಾರ



ಪ್ರತಿಪಕ್ಷ ಧರಣಿ ನಡುವೆ ಬಜೆಟ್ ಮೇಲೆ ಸರ್ಕಾರ ಉತ್ತರ ನೀಡಿದ ಸಿಎಂ ಯಡಿಯೂರಪ್ಪ ಇವತ್ತಿನ ಸಂಯುಕ್ತ ಕರ್ನಾಟಕ ಪತ್ರಿಕೆ ನೋಡಿ. ವಾಸ್ತವ ಏನೆಂದು ಪ್ರಕಟಿಸಿದ್ದಾರೆ.ಸುಪ್ರೀಂ ನ್ಯಾಯಾಧೀಶರಾಗಿದ್ದ ಸಂತೋಷ್‌ಹೆಗ್ಡೆ ಅವರು ಕೋರ್ಟ್‌ಗೆ ರಕ್ಷಣೆ ಕೇಳಿ ಹೋಗುವ ಹಕ್ಕು ಪ್ರತಿಯೊಬ್ಬರಿಗೂ ಇದೆ ಇದನ್ನು ಪ್ರಶ್ನಿಸುವ ಅಧಿಕಾರ ಯಾರಿಗೂ ಇಲ್ಲ ಎಂದಿದ್ದಾರೆ. ಅದರಲ್ಲೂ ಮಹತ್ವದ ಬಜೆಟ್ ಅಧಿವೇಶನದಲ್ಲಿ ಕಾಲಕ್ಷೇಪದ ಧರಣಿ ಅಗತ್ಯವಿತ್ತೇ? ಮಾಡಬೇಕಿದ್ರೆ ಸದನದ ಹೊರಗೆ ಮಾಡಿ ಎಂದಿದ್ದಾರೆ. ಯಾವುದೇ ವ್ಯಕ್ತಿಯ ಚಾರಿತ್ರ್ಯಹರಣದ ಸುಳಿವು ಸಿಕ್ಕಾಗ ರಕ್ಷಣೆಗೆ ಕೋರ್ಟ್‌ಗೆ ಹೋಗುವುದು ಅಪರಾಧವಲ್ಲ ಎಂದು ಹಿರಿಯ ವಕೀಲ ಬಿ.ವಿ.ಆಚಾರ್ಯ ಅವರೇ ಹೇಳಿದ್ದಾರೆ. ಕಾನೂನು ಇದಕ್ಕೆ ಅವಕಾಶ ಮಾಡಿಕೊಟ್ಟಿದೆ ಎಂದು ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ. ಬಜೆಟ್ ಅಧಿವೇಶನದ ಮಹತ್ವದ ಬಗ್ಗೆ ಶಾಸಕರೂ ಆಗಿದ್ದ ಹಿರಿಯ ಪತ್ರಕರ್ತ ಪಿ.ರಾಮಯ್ಯ, ಮಾಜಿ ಸಚಿವ ಎಂ.ಸಿ.ನಾಣಯ್ಯ ಅವರು ಅನುಭವದ ಮಾತನಾಡಿದ್ದಾರೆ. ಇವೆಲ್ಲವನ್ನೂ ಓದಿಯಾದ್ರೂ ನಿಮ್ಮ ನಡವಳಿಕೆ ಬದಲಿಸಿಕೊಳ್ಳಿ ಎಂದು ಸಿಎಂ ಧರಣಿನಿರತ ಪ್ರತಿಪಕ್ಷ ಸದಸ್ಯರಿಗೆ ಮಾತಿನಲ್ಲೇ ಚುಚ್ಚಿದರು. ವಾಸ್ತವ ಅರ್ಥಮಾಡಿಕೊಳ್ಳದೆ ವಿನಾಕಾರಣ ಧರಣಿ ಮಾಡುತ್ತಿದ್ದೀರಿ. ವಿಪಕ್ಷ ನಾಯಕರ ಈ ವರ್ತನೆಯನ್ನು ಖಂಡಿಸುತ್ತೇನೆ. ರಾಜ್ಯದ ಆರೂವರೆ ಕೋಟಿ ಜನರ ತೆರಿಗೆ ಹಣದಿಂದ ಅಧಿವೇಶನ ನಡೆಯುತ್ತಿದೆ. ಇದರ ಮಹತ್ವ ಅರಿಯದೆ ಅಡ್ಡಿಪಡಿಸುವ ನಿಮಗೆ ಜನರೇ ತಕ್ಕಪಾಠ ಕಲಿಸುತ್ತಾರೆಂದು ಎಚ್ಚರಿಸಿ ಮಾತಿಗೆ ತೆರೆಎಳೆದರು.